# NOVEMBER 04, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಬಳ್ಳಾರಿ, ರಾಮನಗರ ಹಾಗೂ ಹಾವೇರಿ ಜಿಲ್ಲೆಗಳ, 3 ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ; ವಿವಿಧ ಪಕ್ಷಗಳಿಂದ ಭರದ ಪ್ರಚಾರ.**
- **ಕೃಷ್ಣ ನದಿ ಅಚ್ಚುಕಟ್ಟು ರೈತರಿಗೆ, ಹಿಂಗಾರಿ ಬೆಳೆಗೆ ನೀರಿನ ಕೊರತೆಯಾಗದು – ಶರಣಬಸಪ್ಪ ದರ್ಶನಾಪುರ.**
- **ಉಭಯವಾಸಿ ಕಪ್ಪೆಗಳ ಬಗ್ಗೆ, ರಾಜ್ಯದ 10 ವಲಯಗಳಲ್ಲಿ ಸಮೀಕ್ಷೆ; 102 ಪ್ರಜಾತಿಗಳ ಹೊಸ ಪಟ್ಟಿ ಸಿದ್ಧ – ಸಂಶೋಧಕ ದೀಪಕ.**
- **ಹುಬ್ಬಳ್ಳಿಯ ಕೆ.ಎಂ.ಸಿ. ಆರ್.ಐ. ಆಥಿತ್ಯದಲ್ಲಿ, ನಾಳೆಯಿಂದ ನಾಲ್ಕು ದಿನಗಳ ಕಾಲ, ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ – ಡಾಕ್ಟರ್ ಎಸ್.ಎಫ್. ಕಮ್ಮಾರ.**

<><><>

**ಈಗ ವಾರ್ತೆಗಳ ವಿವರ**

<><><>

**ಬಳ್ಳಾರಿ ಜಿಲ್ಲೆ ಸಂಡೂರ, ಬೆಂಗಳೂರು ದಕ್ಷಿಣ ಜಿಲ್ಲೆ ಚನ್ನಪಟ್ಟಣ, ಹಾವೇರಿ ಜಿಲ್ಲೆ ಶಿಗ್ಗಾಂವ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ, ಈ ತಿಂಗಳ 13 ರಂದು ನಡೆಯಲಿದೆ. ಬಹಿರಂಗ ಪ್ರಚಾರಕ್ಕೆ, ಇನ್ನು ಏಳು ದಿನಗಳು ಮಾತ್ರ ಬಾಕಿ ಉಳಿದಿವೆ.**

<><><>

**ಬಳ್ಳಾರಿ ಜಿಲ್ಲೆ, ಸಂಡೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಬಂಗಾರು ಹನುಮಂತ ಪರವಾಗಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಮಾಜಿ ಸಚಿವ ಶ್ರೀರಾಮುಲು, ಚೋರನೂರು ಗ್ರಾಮದಲ್ಲಿ ಮತ ಯಾಚಿಸಿದರು.**

<><><>

**ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣ ತುಕಾರಾಂ ಪರ, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ಹಾಗೂ ಸಂಸದ ಈ. ತುಕಾರಾಂ, ಸಂಡೂರು ಕ್ಷೇತ್ರದ ಬೊಮ್ಮಗಟ್ಟ, ಸೋವೇನ ಹಳ್ಳಿ ಸೇರಿದಂತೆ, ವಿವಿಧ ಗ್ರಾಮಗಳಲ್ಲಿ ಅಭ್ಯರ್ಥಿ ಪರ ಪ್ರಚಾರ ಕೈಗೊಂಡರು. (03)**

<><><>

ಹಾವೇರಿ ಜಿಲ್ಲೆ ಶಿಗ್ಗಾಂವ ವಿಧಾನಸಭಾ ಕ್ಷೇತ್ರದಲ್ಲಿ, ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹಮದ್ ಖಾನ್ ಪಠಾಣ್ ಪರವಾಗಿ, ಸಚಿವ ಸತೀಶ ಜಾರಕಿಹೊಳಿ, ಮಾಜಿ ಶಾಸಕ ಅಜ್ಜಂಪೀರ ಖಾದ್ರಿ ಹಾಗೂ ವಿಧಾನ ಪರಿಷತ್ ಸದಸ್ಯ ಸೋಮಣ್ಣ ಬೇವಿನಮರದ, ಗುಡ್ಡದ ಚನ್ನಾಪೂರ, ಚಾಕಾಪೂರದಲ್ಲಿ ಪ್ರಚಾರ ನಡೆಸಿದರು.

<><><>

ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ, ಸವಣೂರು ತಾಲೂಕು ತವರಮೆಳ್ಳಿಹಳ್ಳಿ, ಮನ್ನಂಗಿ, ಸೇರಿದಂತೆ ಹಲವು ಗ್ರಾಮಗಳಲ್ಲಿ ಪ್ರಚಾರ ಕೈಗೊಂಡರು.

<><><>

ಚನ್ನಪಟ್ಟಣದ ವ್ಯಾಪ್ತಿಯ ಹಲವು ಹಳ್ಳಿಗಳಲ್ಲಿ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ರಾಜ್ಯದ ಬಿಜೆಪಿ ಮುಖಂಡರೊಂದಿಗೆ, ಎನ್.ಡಿ.ಎ. ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರವಾಗಿ, ಮತಯಾಚಿಸಿದರು.

<><><>

ಚನ್ನಪಟ್ಟಣ ತಾಲೂಕಿನ ಮಳೂರು ವ್ಯಾಪ್ತಿಯ ಗ್ರಾಮಗಳಲ್ಲಿ, ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮತ್ತು ಡಿ.ಕೆ.ಸುರೇಶ್ ಚುನಾವಣಾ ಪ್ರಚಾರ ನಡೆಸಿದರು.

<><><>

ವಿಧಾನಸಭಾ ಉಪ ಚುನಾವಣೆಯ ಮೂರು ಕ್ಷೇತ್ರಗಳಲ್ಲಿ, ಜಿಲ್ಲಾಡಳಿತಗಳು ಮತದಾನ ಪ್ರಮಾಣ ಹೆಚ್ಚಿಸಲು, ಮತದಾರ ಜಾಗ್ರತಿಗಾಗಿ, ಸ್ವೀಪ್ ಚಟುವಟಿಕೆಗಳನ್ನು ಭರದಿಂದ ಆಯೋಜಿಸಿವೆ. ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ ಪ್ರಕರಣ ಕಂಡುಬಂದಲ್ಲಿ, ಸಿಟಿಜನ್ –ವಿಜಿಲ್ ಆಪ್ ಮೂಲಕ, ಸಾರ್ವಜನಿಕರು ದೂರು ಸಲ್ಲಿಸಬಹುದು ಎಂದು, ರಾಜ್ಯ ಚುನಾವಣಾ ಆಯೋಗ ತಿಳಿಸಿದೆ. ಪಾರದರ್ಶಕ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಲು, ಭಾರತ ಚುನಾವಣಾ ಆಯೋಗ, ಈ ತಂತ್ರಾಂಶವನ್ನು ಸಿದ್ಧಪಡಿಸಿದೆ. ಬಳಕೆದಾರ ಸ್ನೇಹಿಯಾದ ಸಿ–ವಿಜಿಲ್ ತಂತ್ರಾಂಶವನ್ನು, ಗೂಗಲ್ ಪ್ಲೇ ಸ್ಟೋರ್ ನಿಂದ ಡೌನ್‌ಲೋಡ್ ಮಾಡಿ, ಬಳಸಬಹುದಾಗಿದೆ.

<><><>

ಕೃಷ್ಣ ನದಿ ಅಚ್ಚುಕಟ್ಟು ಪ್ರದೇಶದ ರೈತರಿಗೆ, ಹಿಂಗಾರಿ ಬೆಳೆಗೆ ನೀರಿನ ಕೊರತೆಯಾಗುವುದಿಲ್ಲ. ಬರುವ ಮಾರ್ಚ್ ಮೊದಲ ವಾರದ ವರೆಗೆ ಜಲಾಶಯದಲ್ಲಿ ನೀರಿನ ಲಭ್ಯತೆ ಖಾತ್ರಿ ಇದೆ. ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದು, ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಸ್ಪಷ್ಟ ಪಡಿಸಿದ್ದಾರೆ. ಯಾದಗಿರಿ ಜಿಲ್ಲೆ, ಶಹಾಪುರ ತಾಲೂಕಿನ ಭೀಮರಾಯನಗುಡಿಯಲ್ಲಿ, ಅವರು ಸುದ್ದಿಗೋಷ್ಠಿ ನಡೆಸಿದರು. ನೀರಾವರಿ ಸಲಹಾ ಸಮಿತಿ ಸಭೆ ಶೀಘ್ರ ಆಯೋಜಿಸಿ, ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು; ನೀರು ಅನಗತ್ಯ ಹರಿದು, ಪೋಲಾಗದಂತೆ ರೈತರು ಸಹ ಮುನ್ನೆಚ್ಚರಿಕೆ ವಹಿಸಬೇಕು ಎಂದು, ಅವರು ಸಲಹೆ ನೀಡಿದರು. ಈ ಬಾರಿ ಆಲಮಟ್ಟಿ ಜಲಾಶಯದಲ್ಲಿ 105 ಟಿ.ಎಂ.ಸಿ. ಹಾಗೂ ನಾರಾಯಣಪುರ ಜಲಾಶಯದಲ್ಲಿ 17 ಟಿ.ಎಂ.ಸಿ. ನೀರಿದೆ. ಹೀಗಾಗಿ ಹಿಂಗಾರು ಬೆಳೆಗಳಿಗೆ ನೀರಿನ ಅಭಾವವಾಗುವುದಿಲ್ಲ ಎಂದು, ಸಚಿವ ದರ್ಶನಾಪುರ ಮಾಹಿತಿ ನೀಡಿದರು.

<><><>

ಕೃಷಿ ಇಲಾಖೆ, ರೈತರ ಸಹಾಯಕ್ಕಾಗಿ, ದಿನದ 24 ಗಂಟೆ, ವಾರದ ಎಲ್ಲ ದಿನ ಕಾರ್ಯನಿರ್ವಹಿಸುವ, ಏಕೀಕೃತ ಕರೆ ಕೇಂದ್ರ, 1800–425–3553 ಕ್ಕೆ ಕರೆ ಮಾಡಿದರೆ, ತಕ್ಷಣ ಸಹಾಯ ಒದಗಿಸಲಾಗುವುದು ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ, ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ಕುರಿತು ಮಾಹಿತಿ ನೀಡಿರುವ ಅವರು,

ಬೆಳೆ ಬೆಳೆಯುವ ವಿಧಾನಗಳು, ಕೀಟ ನಿರ್ವಹಣೆ, ಕೃಷಿ ತಂತ್ರಜ್ಞಾನ ಕುರಿತು ಸಮಗ್ರ ಮಾಹಿತಿ, ಪರಿಹಾರಗಳ ಮಾರ್ಗದರ್ಶನ, ಬೆಲೆ ಮತ್ತು ಮಾರುಕಟ್ಟೆ ಪ್ರವೃತ್ತಿಗಳ ಕುರಿತು, ನಿಖರ ಮಾಹಿತಿ ರೈತರಿಗೆ ಸಕಾಲದಲ್ಲಿ ಲಭಿಸಲಿವೆ ಎಂದು ಹೇಳಿದ್ದಾರೆ.

<><><>

ಕೇಂದ್ರ ಸರ್ಕಾರ, ಪ್ರತಿ ಕ್ವಿಂಟಾಲ್ ಭತ್ತಕ್ಕೆ, 2 ಸಾವಿರದ 3 ನೂರಾ 20 ರೂಪಾಯಿ ಬೆಂಬಲ ಬೆಲೆ ನಿಗದಿ ಮಾಡಿರುವುದು, ನ್ಯಾಯ ಸಮ್ಮತವಲ್ಲ. ರಾಜ್ಯ ಸರ್ಕಾರ ಭತ್ತಕ್ಕೆ 500 ರೂಪಾಯಿ, ಪ್ರತಿ ಕ್ವಿಂಟಾಲ್‌ಗೆ ಹೆಚ್ಚುವರಿ ಪ್ರೋತ್ಸಾಹ ಧನ ನೀಡಿ, ತಕ್ಷಣ ಭತ್ತ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕು ಎಂದು, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ ಆಗ್ರಹಿಸಿದ್ದಾರೆ. ಯಾದಗಿರಿ ಜಿಲ್ಲೆ, ಸುರಪುರದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕಲಬುರಗಿ ಜಿಲ್ಲೆಯಲ್ಲಿ ಹತ್ತಿ ಖರೀದಿ ಕೇಂದ್ರ ಆರಂಭಿಸುತ್ತಿದ್ದಾರೆ. ಕನಿ ್ಠ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ 7 ಸಾವಿರದ 200 ರೂಪಾಯಿ ದರದಲ್ಲಿ, ಖರೀದಿಸುತ್ತಿದ್ದಾರೆ. ಅದೇ ರೀತಿ ಯಾದಗಿರಿ ಜಿಲ್ಲೆಯಲ್ಲಿಯೂ ಕೂಡಲೇ ಖರೀದಿ ಕೇಂದ್ರ ಆರಂಭಿಸಬೇಕು ಎಂದು, ಅವರು ಒತ್ತಾಯಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಉಭಯವಾಸಿ ಕಪ್ಪೆಗಳ ಬಗ್ಗೆ, ರಾಜ್ಯದ 10 ವಲಯಗಳಲ್ಲಿ, ಕೃಷಿ ಮತ್ತು ಹವಾಮಾನ ಆಧಾರಿತ ಹರಡುವಿಕೆ ಮಾದರಿಯಲ್ಲಿ, ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ದೀಪಕ ಹಾಗೂ ತಂಡ, ಪ್ರಥಮ ಬಾರಿಗೆ ಅಧ್ಯಯನ ಕೈಗೊಂಡು, 102 ಪ್ರಜಾತಿಗಳನ್ನು ಪಟ್ಟಿ ಮಾಡಿದೆ. ಉಭಯಜೀವಿಗಳ ಸಂರಕ್ಷಣಾ ಸ್ಥಿತಿ, ಗತಿ ಹಾಗೂ ಮೇಲುಸ್ತುವಾರಿ ಮೂಲಕ ಸಮೀಕ್ಷಿಸಲು, ಪಶ್ಚಿಮಘಟ್ಟವನ್ನು ಹೊರತು ಪಡಿಸಿ ಕೈಗೊಂಡ ಈ ಅಧ್ಯಯನ ವಿಶೇಷವಾಗಿದೆ. ನವೀಕರಿಸಿದ ಈ ಪಟ್ಟಿ, ಸಂರಕ್ಷಣೆಯ ಪ್ರಯತ್ನಗಳಿಗೆ ಬೇರು ಮಟ್ಟದಲ್ಲಿ ಸಹಕಾರಿಯಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಕಪ್ಪೆಗಳ ಸಂಶೋಧಕ, ದೀಪಕ.

<><><>

ಸಹಾಯಕ ಪ್ರಾಧ್ಯಾಪಕ ದೀಪಕ ಧ್ವನಿ 50 ಸೆಕೆಂದುಗಳು

<><><>

ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ – ಕೆ.ಎಂ.ಸಿ. ಆರ್.ಐ. ಆಥಿತ್ಯದಲ್ಲಿ ನಾಳೆಯಿಂದ ನಾಲ್ಕು ದಿನಗಳ ಕಾಲ, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ, 22ನೇ ಅಂತರ್ ಕಾಲೇಜು ಅಥ್ಲೆಟಿಕ್ ಚಾಂಪಿಯನ್‌ಶಿಪ್ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು, ಕೆ.ಎಂ.ಸಿ. ನಿರ್ದೇಶಕ ಡಾಕ್ಟರ್ ಎಸ್.ಎಫ್. ಕಮ್ಮಾರ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಳೆ ಮಧ್ಯಾಹ್ನ 3 ಗಂಟೆಗೆ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ್ ಎಂ.ಕೆ. ರಮೇಶ ಹಾಗೂ ಅಂತಾರಾಷ್ಟ್ರೀಯ ಕ್ರೀಡಾಪಟು ಸಹನಾಕುಮಾರಿ ಗೊಬ್ಬರಗುಂಪಿ ಅವರು, ಕೆ.ಎಂ.ಸಿ. ಕ್ರೀಡಾಂಗಣದಲ್ಲಿ ಕ್ರೀಡಾಕೂಟಕ್ಕೆ ಚಾಲನೆ ನೀಡುವರು ಎಂದರು.

<><><>

ಕೆ.ಎಂ.ಸಿ. ಪ್ರಾಚಾರ್ಯ ಡಾಕ್ಟರ್ ಗುರುಶಾಂತಪ್ಪ ಯಲಗಚ್ಚಿನ ಮಾತನಾಡಿ, ರಾಜ್ಯದ 101 ವೈದ್ಯಕೀಯ ಮಹಾವಿದ್ಯಾಲಯಗಳಿಂದ, 903 ಕ್ರೀಡಾಪಟುಗಳು ಹೆಸರು ನೋಂದಾಯಿಸಿದ್ದಾರೆ. ಮಳೆ ಬಾಧಿಸಿದರೆ, ಧಾರವಾಡದ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಕ್ರೀಡಾಕೂಟವನ್ನು ಆಯೋಜಿಸಲು ಯೋಜನೆ ಹಾಕಿಕೊಳ್ಳಲಾಗಿದೆ ಎಂದು,

<><><>

ಗದುಗಿನ ಐತಿಹಾಸಿಕ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ, 'ಕರ್ನಾಟಕ' ನಾಮಕರಣ ಸುವರ್ಣ ಸಂಭ್ರಮದ, ಸಮಾರೋಪ ಕಾರ್ಯಕ್ರಮ, ಜರುಗಿತು. ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರು, ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಬೆಳಗಾವಿಯಲ್ಲಿ 1924ರ ಡಿಸೆಂಬರ್ 26 ರಂದು, ಮಹಾತ್ಮ ಗಾಂಧೀಜಿಯವರು ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ, ಖ್ಯಾತ ಹಿಂದೂಸ್ಥಾನಿ ಗಾಯಕಿ, ವಿದುಷಿ ಗಂಗೂಬಾಯಿ ಹಾನಗಲ್ ಅವರು, ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು ಗೀತೆಯನ್ನು ಹಾಡಿದ್ದು, ಹೆಮ್ಮೆಯ ಸಂಗತಿ ಎಂದರು. ವಿಧಾನ ಪರಿ ‘ತ್ ಸಭಾಪತಿ ಬಸವರಾಜ ಹೊರಟ್ಟಿ, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಮ್ಮದ್, ಮಾಜಿ ಸಂಸದ ಪ್ರೊಫೆಸರ್ ಐ.ಜಿ. ಸನದಿ ಸೇರಿದಂತೆ, ಗಣ್ಯರು ಪಾಲ್ಗೊಂಡಿದ್ದರು.

<><><>

ಉತ್ತರಕನ್ನಡ ಜಿಲ್ಲೆ, ಹೊನ್ನಾವರದ ಗಜಾನನ ಕಲೆ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಟ್ರಸ್ಟ್ ಕೊಡಮಾಡುವ, 'ಉತ್ತರಕನ್ನಡ ಜಿಲ್ಲೆ ಯಕ್ಷಶ್ರೀ' ಪ್ರಥಮ ಪ್ರಶಸ್ತಿಗೆ, ಶತಾವಧಾನಿ ಡಾಕ್ಟರ್ ಆರ್. ಗಣೇಶ್ ಆಯ್ಕೆ ಆಗಿದ್ದಾರೆ. ಪ್ರಶಸ್ತಿ ಒಂದು ಲಕ್ಷ ರೂಪಾಯಿ ನಗದು ಹಾಗೂ ಬೆಳ್ಳಿಯ ಕಡಗ ಹೊಂದಿದೆ ಎಂದು, ಯಕ್ಷಗಾನ ಕಲಾವಿದ, ಕೊಂಡದಕುಳಿ ರಾಮಚಂದ್ರ ಹೆಗಡೆ ಹಾಗೂ ಮೋಹನ ಹೆಗಡೆ, ಹೆರವಟ್ಟಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ನವೆಂಬರ್ 12 ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಯಕ್ಷ ವಿಭೂಷಣ ಕೊಂಡದಕುಳಿ ರಾಮಚಂದ್ರ ಹೆಗಡೆಯವರ ಪರಿಕಲ್ಪನೆಯ ಪ್ರಶಸ್ತಿ ಇದಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕನ್ನಡ ಚಿತ್ರರಂಗದ ಹೆಸರಾಂತ ನಟ, ನಿರ್ದೇಶಕ, ಗುರುಪ್ರಸಾದ್ ಅವರ ಸಾವಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಂತಾಪ ಸೂಚಿಸಿದ್ದಾರೆ. (04)

<><><>

ವಿಜಯಪುರದ ಭೂತನಾಳ ಕೆರೆ ಮತ್ತು ಬೇಗಂ ತಾಲಾಬ್ ಬಳಿ ಕೈಗೊಳ್ಳಲಾದ, ಅಭಿವೃದ್ಧಿ ಯೋಜನೆಗಳನ್ನು ಶೀಘ್ರ, ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಲಾಗುವುದು ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

<><><>

ರಾಜ್ಯದ ಗರಿಷ್ಠ ಉಷ್ಣಾಂಶ 35 ಡಿಗ್ರಿ ಸೆಲ್ಸಿಯಸ್ ಕಾರವಾರದಲ್ಲಿ, ಅತಿ ಕಡಿಮೆ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಶಿರಾಲಿಯಲ್ಲಿ ದಾಖಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬಳ್ಳಾರಿ, ರಾಮನಗರ ಹಾಗೂ ಹಾವೇರಿ ಜಿಲ್ಲೆಗಳ, 3 ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆ; ವಿವಿಧ ಪಕ್ಷಗಳಿಂದ ಭರದ ಪ್ರಚಾರ.

- ಕೃಷ್ಣ ನದಿ ಅಚ್ಚುಕಟ್ಟು ರೈತರಿಗೆ, ಹಿಂಗಾರಿ ಬೆಳೆಗೆ ನೀರಿನ ಕೊರತೆಯಾಗದು – ಶರಣಬಸಪ್ಪ ದರ್ಶನಾಪುರ.
- ಉಭಯವಾಸಿ ಕಪ್ಪೆಗಳ ಬಗ್ಗೆ, ರಾಜ್ಯದ 10 ವಲಯಗಳಲ್ಲಿ ಸಮೀಕ್ಷೆ; 102 ಪ್ರಜಾತಿಗಳ ಹೊಸ ಪಟ್ಟಿ ಸಿದ್ಧ – ಸಂಶೋಧಕ ದೀಪಕ.
- ಹುಬ್ಬಳ್ಳಿಯ ಕೆ.ಎಂ.ಸಿ. ಆರ್.ಐ. ಆತಿಥ್ಯದಲ್ಲಿ, ನಾಳೆಯಿಂದ ನಾಲ್ಕು ದಿನಗಳ ಕಾಲ, ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ – ಡಾಕ್ಟರ್ ಎಸ್.ಎಫ್. ಕಮ್ಮಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ